# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 38 |
| ಸದಸ್ಯರ ಹೆಸರು | : | ಶ್ರೀ ಪ್ರಾಣೇಶ್.ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.12.2018 |
| ಉತ್ತರಿಸುವ ಸಚಿವರು | : | ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಫಾರಂ 94ಸಿ ರಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಗಳ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ-94ಸಿ ಮತ್ತು 94ಸಿಸಿ ಮೇರೆಗೆ ಸರ್ಕಾರಿ ಜಮೀನಿನಲ್ಲಿ ಅನಧಿಕೃತ ವಾಸದ ಮನೆ ನಿರ್ಮಿಸಿಕೊಂಡಿರುವುದನ್ನು ಸಕ್ರಮಗೊಳಿಸಲು ಸಲ್ಲಿಕೆಯಾಗಿರುವ ಅರ್ಜಿಗಳನ್ನು ಕಲಂ 94ಸಿ, 94ಸಿಸಿ ಮತ್ತು ಕರ್ನಾಟಕ ಭೂಕಂದಾಯ ನಿಯಮಗಳು 1966ರ ಅಧ್ಯಾಯ XIII-ಬಿ ಅಡಿಯ ಉಪಬಂಧಗಳನ್ನು ಅನುಸರಿಸಿ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. |
| ಆ) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಫಾರಂ 94ಸಿ ರಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಇ) | ಇವುಗಳಲ್ಲಿ ಮಂಜೂರಾಗಿರುವ ಪ್ರಕರಣಗಳು, ವಜಾಗೊಂಡಿರುವ ಪ್ರಕರಣಗಳು ಹಾಗೂ ಸಮಿತಿ ಮುಂದೆ ಮಂಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಈ) | ಉಳಿದ ಹಕ್ಕುಪತ್ರವನ್ನು ಯಾವಾಗ ನೀಡಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು) | ಕಲಂ 94-ಸಿ ಮೇರೆಗೆ ಸ್ವೀಕೃತವಾಗಿರುವ ಅರ್ಜಿಗಳನ್ನು ನಿಯಮ ಪ್ರಕಾರ ಶೀಘ್ರವಾಗಿ ವಿಲೇವಾರಿ ಮಾಡಲು ಹಾಗೂ ಮಂಜೂರಾಗಿರುವ ಪ್ರಕರಣಗಳಿಗೆ ಹಕ್ಕುಪತ್ರ ನೀಡಲು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳುವಂತೆ ತಹಸೀಲ್ದಾರರುಗಳಿಗೆ ಸೂಚನೆ ನೀಡಲಾಗಿದ್ದು, ಕಾಲಕಾಲಕ್ಕೆ ಪ್ರಗತಿ ಪರಿಶೀಲನೆ ನಡೆಸಿ ಶೀಘ್ರ ವಿಲೇವಾರಿಗೆ ಅಗತ್ಯವಿರುವ ಎಲ್ಲಾ ರೀತಿಯ ಕ್ರಮಕೈಗೊಳ್ಳಲಾಗುತ್ತಿದೆ. |

**ಆರ್‌ಡಿ 46 ಎಲ್‌ಜಿಯು 2018**

**ಆರ್.ವಿ.ದೇಶಪಾಂಡೆ**
ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:38ರ ಅನುಬಂಧ-1

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಲಂ 94ಸಿ ರಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆಯ ವಿವರಗಳು

| ಕ್ರಮ ಸಂಖ್ಯೆ | ತಾಲ್ಲೂಕುಗಳು | ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ |
|---|---|---|
| 1 | ಚಿಕ್ಕಮಗಳೂರು | 9027 |
| 2 | ಮೂಡಿಗೆರೆ | 9642 |
| 3 | ಕಡೂರು | 538 |
| 4 | ಕೊಪ್ಪ | 7727 |
| 5 | ತರೀಕೆರೆ | 5365 |
| 6 | ಶೃಂಗೇರಿ | 5267 |
| 7 | ಎನ್.ಆರ್.ಪುರ | 10257 |
| | ಒಟ್ಟು | **47823** |

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:38ರ ಅನುಬಂಧ-2

ಸ್ವೀಕೃತವಾಗಿರುವ ಅರ್ಜಿಗಳಲ್ಲಿ ಮಂಜೂರಾಗಿರುವ ಪ್ರಕರಣಗಳು, ವಜಾಗೊಂಡಿರುವ ಪ್ರಕರಣಗಳು ಹಾಗೂ ಸಮಿತಿ ಮುಂದೆ ಮಂಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆಯ ವಿವರಗಳು:

| ಕ್ರಮ ಸಂಖ್ಯೆ | ತಾಲ್ಲೂಕುಗಳು | ಮಂಜೂರಾಗಿರುವ ಪ್ರಕರಣಗಳ ಸಂಖ್ಯೆ | ವಜಾಗೊಂಡಿರುವ ಪ್ರಕರಣಗಳ ಸಂಖ್ಯೆ | ಸಮಿತಿ ಮುಂದೆ ಮಂಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|---|
| 1 | ಚಿಕ್ಕಮಗಳೂರು | 5193 | 1903 | 1931 |
| 2 | ಮೂಡಿಗೆರೆ | 2334 | 795 | 6513 |
| 3 | ಕಡೂರು | 290 | 248 | 0 |
| 4 | ಕೊಪ್ಪ | 752 | 1452 | 5523 |
| 5 | ತರೀಕೆರೆ | 1695 | 3396 | 274 |
| 6 | ಶೃಂಗೇರಿ | 58 | 313 | 4896 |
| 7 | ಎನ್.ಆರ್.ಪುರ | 1076 | 5424 | 3757 |
| | ಒಟ್ಟು | **11398** | **13531** | **22894** |

***